ಅಧ್ಯಕ್ಷರು : ಈಗ ಪ್ರಶ್ನೋತ್ತರ ಕಾಲ ಮುಕ್ತಾಯವಾಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಕಾನೂನು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೆ 22-2-96ರ 15ನೇ ಪಟ್ಟಿಯಲ್ಲಿರುವ 41 ಪ್ರಶ್ನೆಗಳ ಪೈಕಿ 33 ಪ್ರಶ್ನೆಗಳ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

ಆಶ್ರಯ ಯೋಜನೆಯಡಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂಜೂರಾದ ಮನೆಗಳು

ಆಶ್ರಯ ಯೋಜನೆಯಡಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂಜೂರಾದ ಮನೆಗಳು

177 - ಡಾ|| ಯು. ಚಿತ್ತರಂಜನ್ (ಭಟ್ಕಳ್) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಆಶ್ರಯ ಮನೆಗಳನ್ನು ಕಟ್ಟುವ ಗುರಿ ಎಷ್ಟು?

ಆ) ಈಗ ಎಷ್ಟು ಹಣ ಮಂಜೂರು ಮಾಡಲಾಗಿದೆ?

ಇ) ಈ ಬಗ್ಗೆ ಈಗಾಗಲೇ ಬಿಡುಗಡೆ ಆದ ಹಣವೆಷ್ಟು?

ಈ) ಉಳಿದ ಹಣವನ್ನು ಬಿಡುಗಡೆ ಮಾಡುವ ಯೋಜನೆ ಇದೆಯೇ?

ಶ್ರೀ ಬಸವರಾಜ ರಾಯ್‌ರೆಡ್ಡಿ (ವಸತಿ ರಾಜ್ಯಸಚಿವರು) :

ಅ)	ಗ್ರಾಮಾಂತರ	ನಗರ	ಒಟ್ಟು
	2200	885	3085
ಆ)	44.00	216.82	656.82
ಇ)	186.36 (ರೂ. ಲಕ್ಷಗಳು)	15.99 (ರೂ. ಲಕ್ಷಗಳು)	206.50 (ಲಕ್ಷಗಳು)
	93-94ರಲ್ಲಿ ಬಿಡುಗಡೆಯಾದ ಹೆಚ್ಚುವರಿ ಹಣ	6.15	

ಈ) ಅವಶ್ಯಕತೆಗನುಸಾರವಾಗಿ ಪ್ರಗತಿಯ ವರದಿಯನ್ನಾದರಿಸಿ ಹಣವನ್ನು ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಭಟ್ಕಳದಲ್ಲಿ ಗಿರಿಜನರಿಗೆ ವಸತಿ ನಿಲಯ ಮಂಜೂರು ಮಾಡುವ ಕುರಿತು

170 Ë ಡಾ|| ಯು. ಚಿತ್ತರಂಜನ್ (ಭಟ್ಕಳ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವಸತಿ ನಿಲಯವಿಲ್ಲದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಭಟ್ಕಳದಲ್ಲಿ ಹೊಸದಾಗಿ ಪರಿಶಿಷ್ಟ ಪಂಗಡವರಿಗೆ ವಿದ್ಯಾರ್ಥಿ ವಸತಿ ನಿಲಯ ಸ್ಥಾಪಿಸಲಾಗುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಜನಸಂಖ್ಯೆಗೆ ಅನುಗುಣವಾಗಿ ಭಟ್ಕಳ ತಾಲ್ಲೂಕಿನಲ್ಲಿ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಿ ನಡೆಸಲಾಗುತ್ತಿದೆ.

ಆ) ಮೇಲೆ ವಿವರಿಸಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಶ್ರಾಂತಿ ತಾಣವಾದ ಇಂದಿರಾ ಗಾಜಿನ ಮನೆಯ ಅವ್ಯವಸ್ಥೆ

186 - ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ - ಧಾರವಾಡ ಮಹಾನಗರ ಜನತೆಯ ಪ್ರಮುಖ ವಿಶ್ರಾಂತಿ ತಾಣವಾದ ಇಂದಿರಾ ಗಾಜಿನ ಮನೆ ಸರಿಯಾದ ಉಸ್ತುವಾರಿ ಇಲ್ಲದೆ ಅವ್ಯವಸ್ಥೆಯಾಗಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಅದನ್ನು ಸುಧಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಬಂದಿದೆ

ಆ) ಇಂದಿರಾ ಗಾಜಿನ ಮನೆಯನ್ನು ತಗ್ಗು ಪ್ರದೇಶದಲ್ಲಿ ಕಟ್ಟಲಾಗಿದ್ದು, ಆ ತಗ್ಗು ಪ್ರದೇಶದಲ್ಲಿ ಇದೇ ವರ್ಷ 2,00 ಟ್ರಕ್ಕೂಗಳಿಗೂ ಮಿಕ್ಕಿ ಮಣ್ಣನ್ನು ಹಾಕಿ ಸಮ ಮಾಡುವ ಕಾರ್ಯಭರದಿಂದ ಸಾಗಿದೆ. ಅಲ್ಲದೆ 1994-95ರಲ್ಲಿ ಸದರಿ ಉದ್ಯಾನದ ನಕ್ಷೆಯಂತೆ ರಸ್ತೆಗಳಿಗೆ ಡಾಂಬರೀಕರಣ ಮಾಡುವುದಲ್ಲದೇ, ಕಲ್ಲಿನ ಜೋಡಣೆಯನ್ನು ಮಾಡಲಾಗಿದೆ. ಮತ್ತು 2-12-95ರಂದು ಮಾನ್ಯ ನಗರಾಭಿವೃದ್ಧಿ ಸಚಿವರಿಂದ ಬೃಹತ್ ಕಾರಂಜಿಯ ಉದ್ಘಾಟನೆಯಾಗಿ ಪ್ರತಿ ದಿವಸ ಸಾವಿರಾರು ಜನರು ವೀಕ್ಷಿಸಿ ಸಂತೋಷಿಸುತ್ತಿದ್ದಾರೆ. ಮತ್ಸ್ಯಾಲಯದ ನವೀಕರಣವನ್ನು ಕೈಗೆತ್ತಿಕೊಳ್ಳಲಾಗಿದೆ. ಇದಲ್ಲದೇ ಈಜುಕೊಳದಿಂದ ಬರುವ ನೀರು ಹಾಗೂ ಉದ್ಯಾನದಲ್ಲಿ ಬರುವ ನೀರನ್ನು ಹೊರ ಹಾಕಲು ಪೆಟ್ಟಿಗೆ ಆಕಾರದ ಗಟಾರವನ್ನು ಕಟ್ಟುತ್ತಿದ್ದು ಅದು ಮುಗಿಯುವ ಹಂತದಲ್ಲಿದೆ. ಈ ಉದ್ಯಾನವನ್ನು ಬರುವ ಸೆಪ್ಟೆಂಬರ್‌ನಲ್ಲಿ ಜರುಗುವ ಉದ್ಯಾನವನಗಳ ಸ್ಪರ್ಧೆಗೆ ಕೊಡುವ ಮಟ್ಟಕ್ಕೆ ತರಲಾಗುವುದು.

ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಸಾರ್ವಜನಿಕ ದೀಪದ ವ್ಯವಸ್ಥೆ

179 - ಶ್ರೀ ಜಗದೀಶ್ ಶೆಟ್ಟರ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಸಾರ್ವಜನಿಕ ದೀಪದ ವ್ಯವಸ್ಥೆಯನ್ನು ಸುಧಾರಿಸಲು ಮಹಾನಗರ ಸಭೆಯ ಆಡಳಿತ ವ್ಯಾಪ್ತಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸಬ್‌ಡಿವಿಜನ್ ಒಂದು ಪ್ರಾರಂಭಿಸುವ ವಿಷಯ ಅತೀ ಅವಶ್ಯ ಇರುವುದು ಸರ್ಕಾರದವರು ಯೋಜಿಸಿರುವರೆ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು) :

ಅ) ಹೌದು

ಆ) ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಯ ಆಡಳಿತ ವ್ಯಾಪ್ತಿಯಲ್ಲಿ ಕೆ.ಇ.ಬಿ. ಉಪ ವಿಭಾಗವನ್ನು ತೆರೆಯುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದ್ದು ಈ ವಿಭಾಗಕ್ಕಾಗಿಯೇ ಒಂದು ಸಹಾಯಕ ಇಂಜಿನಿಯರ್ ಹುದ್ದೆ, 9 ಲೈನ್‌ಮೆನ್ ಹುದ್ದೆ ಹಾಗೂ 17 ಸಹಾಯಕ ಲೈನ್‌ಮೆನ್ ಹುದ್ದೆಗಳನ್ನು ಹೊಸದಾಗಿ ಸೃಜಿಸಬೇಕಾಗುತ್ತದೆ. ಈ ಹೊಸ